ವಾದ ಮಂಡಿಸುತ್ತೇನೆ" ಎಂದರು. ಜಡ್ಜ್ ಸಾಹೇಬರು "ಎಸ್, ಪ್ರೊಸೀಡ್..." ಎಂದರು.

"ಮೈ ಲಾರ್ಡ್ ನನ್ನ ಕಕ್ಷಿದಾರರಾದ ಆಪಾದಿತ ಸುನೀಲ್ ಮನೋಹರ್ ದ್ರಾಕ್ಷೀಪುರ್ ರುದ್ರಾಕ್ಷಿಪುರದ ಒಂದು ಖಾಸಗೀ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದಾರೆ. ಅವರು ಉದ್ಯೋಗ ನಿಮಿತ್ತ ಎರಡು ಮೂರು ತಿಂಗಳಿಗೊಮ್ಮೆ ಬೆಂಗಳೂರಿನ ಅವರ ಸಂಸ್ಥೆಯ ಮುಖ್ಯ ಕಚೇರಿಗೆ ಬರುತ್ತಿರುತ್ತಾರೆ. ಆಗ ಅವರು ಅವರ ಅಕ್ಕ ಹೇಮಾಮಾಲಿನಿ ದ್ರಾಕ್ಷಿಪುರ್ ಅವರ ಮನೆಯಲ್ಲಿಯೇ ಮೂರು ನಾಲ್ಕು ದಿನ ಕಚೇರಿ ಕೆಲಸ ಮುಗಿಯುವ ತನಕ ಇದ್ದು, ವಾಪಸ್ ರುದ್ರಾಕ್ಷಿಪುರಕ್ಕೆ ಹೋಗುತ್ತಾರೆ. ಆದರೆ, ಇವರು ತಮ್ಮ ಸಂಸ್ಥೆಯಿಂದ ಟಿ.ಎ. ಡಿ.ಎ. ಜತೆಗೆ ಲಾಡ್ಜಿಂಗ್ ಬಿಲ್ ಪಡೆಯುವುದಕ್ಕೋಸ್ಕರ ಮೆಜೆಸ್ಟಿಕ್ ಬಳಿಯಿರುವ ಸುಂದರಿ ಲಾಡ್ಜ್‌ನಲ್ಲಿ ತಂಗಿದ ಹಾಗೆ ದಾಖಲೆ ಮಾಡಿಸಿ ಬಿಲ್ ಪಡೆದುಕೊಂಡು ಹೋಗುತ್ತಿದ್ದರು. ಸುಂದರಿ ಲಾಡ್ಜ್‌ನವರು ಇವರಿಂದ ಸ್ವಲ್ಪ ಹಣ ಪಡೆದು ಇವರು ರೂಮಿನಲ್ಲಿರುವ ಹಾಗೆ ರಿಜಿಸ್ಟರಿನಲ್ಲಿ ದಾಖಲೆ ಮಾಡಿ, ಬಿಲ್ ಕೊಡುತ್ತಿದ್ದರು. ಇವರು ಹೇಗೂ ಆ ರೂಮಿನಲ್ಲಿರುವುದಿಲ್ಲವಾದ್ದರಿಂದ, ಬೇರೆ ಯಾರಾದರೂ ಗಿರಾಕಿ ಬಂದರೆ, ಇವರ ಹೆಸರಿನಲ್ಲಿರುವ ರೂಮನ್ನೂ ಕೊಡುತ್ತಿದ್ದರು. ಕಲಾಪ ವೀಕ್ಷಿಸುತ್ತಿದ್ದ ಆಪಾದಿತ ಸುನೀಲನ ಅಕ್ಕ ಹೇಮಾಮಾಲಿನಿ ಎದ್ದು ನಿಂತು "ಇದೊಂದೇ ಇವನು ಮಾಡಿರುವ ಮಣ್ಣು ತಿನ್ನೋ ಕೆಲ್ಸ. ಈಗ ನೋಡಿ ಎಂಥ ತೊಂದ್ರೆಗೆ ಸಿಕ್ಕಾಕ್ಕೊಂಡಿದಾನೆ..." ಅಂತ ತಮ್ಮನಿಗೆ ಬೈಯ ತೊಡಗಿದಳು. ಆಗ ಜಡ್ಜ್ ಸಾಹೇಬರು "ಏ ಯಾರ್ರೀ... ಅದು? ಸುಮ್ನೆ ಕೂತ್ಕೊಳ್ರೀ... ನಿಮ್ಮ ಮನೆ ಅಲ್ಲ ಇದು. ಮಧ್ಯೆ ಬಾಯಿ ಹಾಕಿದ್ರೆ ನಿಮ್ಮನ್ನೂ ಒಳಗೆ ಹಾಕಿಸಬೇಕಾಗುತ್ತೆ" ಅಂತ ಎಚ್ಚರಿಸಿದರು. "ಯು ಕೆನ್ ಪ್ರೊಸೀಡ್ ಎಂದು ಲಾಯರ್ ಅಂಜನಾಸುತರಿಗೆ ಹೇಳಿದರು. "ಮೈ ಲಾರ್ಡ್, ನನ್ನ ಕಕ್ಷಿದಾರರಾದ ಸುನೀಲ್ ಮನೋಹರ್ ದ್ರಾಕ್ಷಿಪುರ ಅವರು ಕ್ರಿಮಿನಲ್ ಹಿನ್ನೆಲೆಯವರಲ್ಲ. ಒಬ್ಬ ಸಾಧಾರಣ ಗುಮಾಸ್ತ. ಏನೋ ಲಾಡ್ಜಿಂಗ್ ಬಿಲ್‌ನ ಆಸೆಗಾಗಿ ರೂಮಿನ ಬಿಲ್ ಪಡೆದಿದ್ದಾರೆ ಅಷ್ಟೇ. ಅವರು ಆ ರೂಮಿನಲ್ಲಿ ಇರಲೇ ಇಲ್ಲ. ಆ ಯುವತಿ ಯಾರೆಂದೂ ಇವರಿಗೆ ಗೊತ್ತಿಲ್ಲ. ಇವನಿಗೆ ಸಾಕ್ಷಿ ನಾಶ ಮಾಡುವಷ್ಟು ಪ್ರಭಾವವೂ ಇಲ್ಲ. ಧೈರ್ಯವೂ ಇಲ್ಲ. ಆದ್ದರಿಂದ ಇವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೂಂತ ಕೇಳ್ಕೋತೀನಿ ಯುವರ್ ಆನರ್" ಎಂದರು ಕ್ರಿಮಿನಲ್ ಲಾಯರ್ ಅಂಜನಾಸುತ ಅವರು. ಆಗ ಸರ್ಕಾರಿ ವಕೀಲರು "ಇವನ ಮುಗ್ಧ ಮುಖ ನೋಡಿ, ಗುಮಾಸ್ತ ಅನ್ನೋ ಹುದ್ದೆ ನೋಡಿ ಇವನನ್ನು ಬಿಡಲಾಗುವುದಿಲ್ಲ ಮೈ ಲಾರ್ಡ್, ಈಗಿನ ಕಾಲದಲ್ಲಿ ಸಾಫ್ಟ್‌ವೇರ್ ಹುಡುಗಿಯರೇ ಕೊಲೆ ಮಾಡಿಸಿರುವಂತಹ ಘಟನೆಗಳು ಎಷ್ಟೋ ನಡೆದಿವೆ. ಅದೂ ಅಲ್ಲದೇ ಆಪಾದಿತನ ಬೆರಳ ಗುರುತುಗಳು ಇರುವ ಚಾಕು, ಫೋರ್ಕುಗಳು ಹಾಗೂ ಗ್ಲಾಸುಗಳೂ ರೂಮಿನಲ್ಲಿ ಸಿಕ್ಕಿವೆ. ಆದ್ದರಿಂದ ಆಪಾದಿತ 180ನೇ ನಂಬರಿನ ರೂಮಿನಲ್ಲಿದ್ದುದು ಸಾಬೀತಾಗಿದೆ. ಹಾಗಾಗಿ ಆಪಾದಿತನಿಗೆ ಜಾಮೀನು ಕೊಡಬಾರದು ಯುವರ್ ಆನರ್" ಎಂದರು. "ನೀವೇನು ಹೇಳ್ತೀರ ಅಂಜನಾಸುತ ಅವರೇ" ಎಂದು ಜಡ್ಜ್ ಸಾಹೇಬರು ಕೇಳಿದರು.

"ಯುವರ್ ಆನರ್, ರೂಮಿನಲ್ಲಿರುವ ಹಾಗೆ ದಾಖಲೆ ಮಾಡಲು ನನ್ನ ಕಕ್ಷಿದಾರರು ರಿಜಿಸ್ಟರಿನಲ್ಲಿ ಅವರ ವಿಳಾಸ ಹಾಗೂ ಮೊಬೈಲ್ ನಂಬರ್ ಕೊಟ್ಟಿದ್ದಾರೆ. ಆ ಫೋನ್ ನಂಬರ್‌ಗೆ ಪೊಲೀಸಿನವರು ಫೋನ್ ಮಾಡಿ ಪೊಲೀಸ್ ಸ್ಟೇಷನ್‌ಗೆ ಬರಲು ಹೇಳಿದ ಕೂಡಲೇ ನನ್ನ ಕಕ್ಷಿದಾರರು ಬಂದಿದ್ದಾರೆ. ಇದೇ ಅವನ ಮುಗ್ಧತೆಯನ್ನು ತೋರಿಸುತ್ತದೆ. ಇವನಿಗೆ ಕ್ರಿಮಿನಲ್ ಬುದ್ಧಿ ಇದ್ದಿದ್ದರೆ ಸರಿಯಾದ ವಿಳಾಸ, ಫೋನ್ ನಂಬರ್ ಕೊಡುತ್ತಿದ್ದನೇ? ಕೊಲೆ ಪ್ರಯತ್ನ